ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.

## ಕ್ರಿ ಮೊ ಸಂಖ್ಯೆ **235/2014**

ಪಿರ್ಯಾದಿ ಃ ರಾಜ್ಯದ ಪರವಾಗಿ ಲಕ್ಕವಳ್ಳಿ ಪೊಲೀಸರು

-ವಿರುದ್ಧ-

ಆರೋಪಿ/ತರು ಃ ಎಂ.ಎ.ರವಿನಾರಾಯಣ ಬಿನ್ ಎಂ.ಎಸ್.ಅಶ್ವಥನಾರಾಯಣ

ದಂ.ಪ್ರ.ಸಂ. ಕಲಂ **313** ರಡಿಯಲ್ಲಿ ಆರೋಪಿಯ ವಿಚಾರಣಾ ಹೇಳಿಕೆ

ಪ್ರಶ್ನೆ-1ಃ ಅಭಿಯೋಜನೆ ಪರ ಸಾಕ್ಷಿಗಳ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?
ಉತ್ತರ ಃ ಹೌದು

ಪ್ರಶ್ನೆ-2ಃ ಪ್ರಾಸಾ-1 ಹೆಚ್.ಎಸ್.ಗುರುನಾಥ್, ಮುಖ್ಯ ವ್ಯವಸ್ಥಾಪಕರು, ಕಾವೇರಿ ಗ್ರಾಮೀಣ ಬ್ಯಾಂಕ್ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 16.11.2012 ರಿಂದ ಮೇ 2014 ರವರೆಗೆ ತಾನು ಪ್ರಾದೇಶಿಕ ವ್ಯವಸ್ಥಾಪಕನಾಗಿ ಕಾವೇರಿ ಗ್ರಾಮೀಣ ಬ್ಯಾಂಕ್, ಚಿಕ್ಕಮಗಳೂರಿನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃ ಸುಳ್ಳು

ಪ್ರಶ್ನೆ-3 ಃ ಪ್ರಾಸಾ-1 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ದಿನಾಂಕ 23.12.2011 ರಿಂದ 03.06.2014 ರವರಿಗೆ ವ್ಯವಸ್ಥಾಪಕರಾಗಿ ಕಾವೇರಿ ಗ್ರಾಮೀಣ ಬ್ಯಾಂಕ್, ಬಾವಿಕೆರೆ ಶಾಖೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃ ಸುಳ್ಳು

ಪ್ರಶ್ನೆ-4 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 03.06.2013 ರಂದು ಸಂಜೆ 04.00 ಗಂಟೆಯ ಸಮಯದಲ್ಲಿ ಆರೋಪಿಯಾದ ನೀವು ದೂರವಾಣಿ ಕರೆ ಮಾಡಿ ರೂ.15 ಲಕ್ಷಗಳನ್ನು ಕಾವೇರಿ ಗ್ರಾಮೀಣ ಬ್ಯಾಂಕ್, ತರೀಕೆರೆಗೆ ರೆಮಿಟೆನ್ಸ್ ಮಾಡಲು ತರುತ್ತಿದ್ದಾಗ ಕಳುವಾಗಿರುತ್ತದೆ ಎಂದು ತಿಳಿಸಿರುತ್ತಿರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃಸುಳ್ಳು

ಪ್ರಶ್ನೆ-5 ಃಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಮರುದಿನ ದಿನಾಂಕ 04.06.2013 ರಂದು ಬೆಳಿಗ್ಗೆ ತಾನು ಹಾಗೂ ಬ್ಯಾಂಕ್ ನ ಇತರ ಉನ್ನತ ಅಧಿಕಾರಿಗಳು ಬಾವಿಕೆರೆ ಶಾಖೆಗೆ ಭೇಟಿ ಮಾಡಿ ಕ್ಯಾಶ್ ಬುಕ್, ಒಚರ್ ಹಾಗೂ ರೆಮಿಟೆನ್ಸ್ ರಿಜಿಸ್ಟರ್ ದಾಖಲಾತಿಗಳನ್ನು ಪರಿಶೀಲಿಸಿ ಆಡಿಟ್ ಮಾಡಿದಾಗ

ಆರೋಪಿಯಾದ ನೀವು ದಿನಾಂಕ 03.06.2013 ರ ಮಧ್ಯಾಹ್ನ 02.10 ಗಂಟೆಯಲ್ಲಿ ಬ್ಯಾಂಕಿನ ಓಚರ್ ಗೆ ಮತ್ತು ಕ್ಯಾಶ್ ಬುಕ್ಕಿಗೆ ತಮ್ಮ ಸಹಿ ಮಾಡಿ ರೂ.15 ಲಕ್ಷವನ್ನು ತೆಗೆದುಕೊಂಡು ಹೋಗಿರುವುದು ಕಂಡುಬರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-6 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ತರೀಕೆರೆ ಶಾಖೆಯಲ್ಲಿ ವಿಚಾರಿಸಿದಾಗ ಆರೋಪಿಯಾದ ನಿಮ್ಮಿಂದ ರೂ.15 ಲಕ್ಷ ಹಣವನ್ನು ರೆಮಿಟೆನ್ಸ್ ಆಗಿರುವುದಿಲ್ಲವೆಂದು ತಿಳಿಸಿರುತ್ತಾರೆ, ಶಾಖಾ ವ್ಯವಸ್ಥಾಪಕರು, ತರೀಕೆರೆಯವರಿಂದ ಲಿಖಿತ ಮಾಹಿತಿಯನ್ನು ಪಡೆದಿರುತ್ತೇವೆ, ಆರೋಪಿಯಾದ ನಿಮ್ಮನ್ನು ವಿಚಾರಿಸಿದಾಗ ಮೊದಲು ಕಳುವಾಗಿದೆ ಎಂದು ತಿಳಿಸಿದ್ದು, ನಂತರ ಹೆಚ್ಚಿನ ವಿಚಾರಣೆ ಮಾಡಿದಾಗ ರೂ.15 ಲಕ್ಷ ಹಣವನ್ನು ತನ್ನ ಸ್ವಂತಕ್ಕೆ ಬಳಸಿಕೊಂಡಿರುವುದಾಗಿ ತಪ್ಪನ್ನು ಒಪ್ಪಿಕೊಂಡು ಬರವಣಿಗೆಯಲ್ಲಿ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-7 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆಡಿಟ್ ಮಾಡಿಸಲಾಗಿ ರೂ.1,000/- ಮುಖಬೆಲೆಯ 400 ನೋಟುಗಳು, ರೂ.500/- ಮುಖಬೆಲೆಯ 2,100 ನೋಟುಗಳು ಹಾಗೂ ರೂ.100/- ಮುಖಬೆಲೆಯ 500 ನೋಟುಗಳನ್ನು ತೆಗೆದುಕೊಂಡು ಹೋಗಿರುವುದು ಕಂಡುಬಂತು, ಸಾರ್ವಜನಿಕರ ದುಡ್ಡು ದುರುಪಯೋಗ ಮಾಡಿಕೊಂಡು ಬ್ಯಾಂಕಿಗೆ ವಂಚನೆ ಮಾಡಿರುವುದು ಕಂಡು ಬಂತು, ಮುಖ್ಯ ಕಛೇರಿಯಿಂದ ಅನುಮತಿಯನ್ನು ಪಡೆದು ದೂರನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-8 ಃ ಪ್ರಾಸಾ-2 ಶಂಕರ್ ಕನವಳ್ಳಿ ರವರು ತಮ್ಮ ಸಾಕ್ಷ್ಯದಲ್ಲಿ, ಜನವರಿ 2013 ರಿಂದ ಮೇ 2014 ರವರೆಗೆ ತಾನು ಚಿಕ್ಕಮಗಳೂರಿನ ಪ್ರಾದೇಶಿಕ ಕಛೇರಿಯಲ್ಲಿ ಹಿರಿಯ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-9 ಃ ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ತನಗೆ ಗೊತ್ತು, ಬಾವಿಕೆರೆ ಶಾಖೆಯಲ್ಲಿ 2013 ನೇ ಸಾಲಿನಲ್ಲಿ ವ್ಯವಸ್ಥಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದಿರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-10 :ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 03.06.2013 ರಂದು ತಾನು ಚಿಕ್ಕಮಗಳೂರಿನ ಪ್ರಾದೇಶಿಕ ಕಛೇರಿಯಲ್ಲಿ ಕರ್ತವ್ಯದಲ್ಲಿದ್ದಾಗ ಸಂಜೆ 04.00 ಗಂಟೆ ಸಮಯದಲ್ಲಿ ಆರೋಪಿಯಾದ ನೀವು ದೂರವಾಣಿ ಕರೆ ಮಾಡಿ ಕ್ಯಾಶ್ ರೆಮಿಟೆನ್ಸ್ ಗೆ ತರುತ್ತಿರುವಾಗ ರೂ.15,00,000/- ಕಳ್ಳತನವಾಗಿದೆ ಎಂದು ತಿಳಿಸಿದಿರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :ಸುಳ್ಳು

ಪ್ರಶ್ನೆ-11 :ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪ್ರಾದೇಶಿಕ ವ್ಯವಸ್ಥಾಪಕರ ಎದುರು ತಾನು ಆ ಸಮಯದಲ್ಲಿ ಕುಳಿತಿದ್ದೆ, ಅವರಿಗೆ ಈ ವಿಷಯವನ್ನು ತಿಳಿಸಿ ಅವರೊಟ್ಟಿಗೆ ಸಮಾಲೋಚನೆ ಮಾಡಿ, ಆರೋಪಿಯಾದ ನಿಮಗೆ ತರೀಕೆರೆ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡುವಂತೆ ತಿಳಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :ಸುಳ್ಳು

ಪ್ರಶ್ನೆ-12 :ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾನು ಪ್ರಾದೇಶಿಕ ವ್ಯವಸ್ಥಾಪಕರುಗಳಾದ ಚಾಸಾ-1 ಹಾಗೂ ಸತ್ಯನಾರಾಯಣರವರು ಕೂಡಲೇ ತರೀಕೆರೆಗೆ ಹೊರಟು ಬಂದೆವು, ತರೀಕೆರೆ ಮ್ಯಾನೇಜರ್ ಆದ ದೇವರಾಜ್ ಹಾಗೂ ಆರೋಪಿಯಾದ ನೀವು ತರೀಕೆರೆ ಪೊಲೀಸ್ ಠಾಣೆಯಲ್ಲಿದ್ದಿರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :ಸುಳ್ಳು

ಪ್ರಶ್ನೆ-13 :ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತಾವು ಬಾವಿಕೆರೆ ಶಾಖೆಗೆ ಹೋಗಿ ಅಲ್ಲಿ ರೆಮಿಟೆನ್ಸ್ ಬಗ್ಗೆ ವಿವರವನ್ನು ಪಡೆದು ಮರಳಿ ತರೀಕೆರೆ ಪೊಲೀಸ್ ಠಾಣೆಗೆ ಬಂದೆವು , ಅಲ್ಲಿ ಆರೋಪಿಯಾದ ನಿಮ್ಮ ಆರೋಗ್ಯ ಸ್ಥಿತಿ ಸರಿ ಇಲ್ಲದ ಕಾರಣ ತರೀಕೆರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ನಂತರ ನಿಮ್ಮ ವಾಸ ಸ್ಥಳವಾದ ಕಡೂರಿನ ಆಸ್ಪತ್ರೆಗೆ ಕರೆದುಕೊಂಡು ಹೋದೆವು, ನಂತರ ಅವರ ಪತ್ನಿ ಹಾಗೂ ಮಗನನ್ನು ಬರಲು ತಿಳಿಸಿದೆವು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :ಸುಳ್ಳು

ಪ್ರಶ್ನೆ-14 :ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಮರುದಿನ ಬೆಳಿಗ್ಗೆ ಆಸ್ಪತ್ರೆಗೆ ಭೇಟಿ ನೀಡಿ ಆರೋಪಿಯಾದ ನಿಮ್ಮನ್ನು ಘಟನೆಯ ಕುರಿತು ವಿಚಾರಿಸಲಾಗಿ ಆರೋಪಿಯಾದ ನೀವು ರೂ.15,00,000/- ಹಣವನ್ನು ನೀವೇ ಬಳಸಿಕೊಂಡಿರುವುದಾಗಿ ತಿಳಿಸಿದಿರಿ ಹಾಗೂ ಈ ಬಗ್ಗೆ ಬರವಣಿಗೆಯನ್ನು ನೀಡಿದಿರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-15 ಃಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ತನಗೆ ಪ್ರಾದೇಶಿಕ ವ್ಯವಸ್ಥಾಪಕರು ಶಾಖೆಗೆ ಹೋಗಿ ವಿವರವಾಗಿ ಪರಿಶೀಲನೆ ಮಾಡಿ ವರದಿ ನೀಡುವ ಬಗ್ಗೆ ತಿಳಿಸಿದ ಮೇರೆಗೆ ತಾನು ದಿನಾಂಕ 04.06.2013 ರಂದು ಬಾವಿಕೆರೆ ಶಾಖೆಗೆ ಹೋಗಿ ರೆಮಿಟೆನ್ಸ್ ಚಲನ್ ಗಳನ್ನು, ಕ್ಯಾಶ್ ಪುಸ್ತಕವನ್ನು ಪರಿಶೀಲನೆ ಮಾಡಿ ಅಲ್ಲಿನ ಕ್ಯಾಷಿಯರ್ ಆದ ಚಾಸಾ-3 ರವರ ಹೇಳಿಕೆಯನ್ನು ಪಡೆದು ನಂತರ ತರೀಕೆರೆಯ ತಮ್ಮ ಶಾಖೆಗೆ ಬಂದು ದಿನಾಂಕ 03.06.2013 ರಂದು ಆರೋಪಿಯಾದ ನೀವು ರೂ.15,00,000/- ಹಣವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಿರುತ್ತಾರೋ ಇಲ್ಲವೋ ಎಂದು ಪರಿಶೀಲನೆ ಮಾಡಿರುತ್ತೇನೆ, ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-16 ಃಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ವ್ಯವಸ್ಥಾಪಕರಾದ ದೇವರಾಜ್ ಇವರು ಆರೋಪಿಯಾದ ನೀವು ಯಾವುದೇ ಹಣವನ್ನು ಜಮಾ ಮಾಡಿಲ್ಲವೆಂದು ತಿಳಿಸಿ ಆ ಬಗ್ಗೆ ದೃಢೀಕರಣ ಪತ್ರವನ್ನು ನೀಡಿದರು, ಇವೆಲ್ಲವುಗಳನ್ನು ತಾನು ಪ್ರಾದೇಶಿಕ ವ್ಯವಸ್ಥಾಪಕರಾದ ಚಾಸಾ-1 ರವರಿಗೆ ವರದಿಯನ್ನು ಮಾಡಿರುತ್ತೇನೆ, ತಾನು ತನಿಖಾಧಿಕಾರಿಗಳ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-17 ಃಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 01.06.2013 ರಂದು ಬಾವಿಕೆರೆ ಬ್ಯಾಂಕ್ ಖಾತೆಯಲ್ಲಿ ರೂ.15,61,388/- ಗಳು ಇತ್ತು, ದಿನಾಂಕ 02.06.2013 02.06.2013 ರಂದು ಭಾನುವಾರವಾಗಿದ್ದು, ದಿನಾಂಕ 03.06.2013 ರಂದು ಬಾವಿಕೆರೆ ಬ್ಯಾಂಕ್ ಖಾತೆಯಲ್ಲಿ ರೂ.2,63,869/- ಗಳು ಇತ್ತು, ಸದರಿ ರೂ.2,63,869/- ಗಳು ಆರೋಪಿಯಾದ ನೀವು ದಿನಾಂಕ 03.06.2013 ರಂದು ಬ್ಯಾಂಕಿಗೆ ರೆಮಿಟ್ ಮಾಡಲು ರೂ.15,00,000/- ಗಳನ್ನು ತೆಗೆದುಕೊಂಡು ಹೋದ ನಂತರ ಉಳಿಕೆಯ ಹಣವಾಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-18 ಃಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಿಪಿ-5 ರ ರೆಮಿಟೆನ್ಸ್ ಪುಸ್ತಕದಲ್ಲಿ ಆರೋಪಿಯಾದ ನೀವು ದಿನಾಂಕ 03.06.2013 ರಂದು ತರೀಕೆರೆ ಬ್ಯಾಂಕಿಗೆ ರೆಮಿಟ್ ಮಾಡಲು ಮಧ್ಯಾಹ್ನ 02.10 ಕ್ಕೆ ತೆಗೆದುಕೊಂಡು ಹೋಗಿರುವ ಕುರಿತು ಸದರಿ ಪುಸ್ತಕದಲ್ಲಿ ನಮೂದು ಮಾಡಿದ್ದು ಆರೋಪಿಯಾದ

ನೀವು ಸಹಿ ಮಾಡಿರುತ್ತೀರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-19 ಃ ಪ್ರಾಸಾ-3 ಸಚಿನ್ ಕುಮಾರ್ ಆಫೀಸ್ ಅಸಿಸ್ಟೆಂಟ್ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 27.05.2013 ರಿಂದ 04.06.2013 ರವರೆಗೆ ತಾನು ಬಾವಿಕೆರೆಯ ಕಾವೇರಿ ಬ್ಯಾಂಕ್ ನ ಶಾಖೆಯಲ್ಲಿ ಪ್ರಭಾರದ ಮೇಲೆ ಕರ್ತವ್ಯ ನಿರ್ವಹಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-20 ಃ ಪ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ತನಗೆ ಗೊತ್ತು, ತಾನು ಬಾವಿಕೆರೆ ಶಾಖೆಯಲ್ಲಿ ಪ್ರಭಾರ ಕರ್ತವ್ಯ ನಿರ್ವಹಿಸುತ್ತಿದಾಗ ಆರೋಪಿಯಾದ ನೀವು ವ್ಯವಸ್ಥಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದಿರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-21 ಃಪ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 03.06.2013 ರಂದು ಮಧ್ಯಾಹ್ನ ಸುಮಾರು 02.10 ರ ಸಮಯದಲ್ಲಿ ಬಾವಿಕೆರೆ ಶಾಖೆಯಲ್ಲಿ ಕ್ಯಾಷ್ ಹಣ ಹೆಚ್ಚಾಗಿದೆ ಎಂದು ಹೇಳಿ ಸುಮಾರು ರೂ.15,00,000/- ಹಣವನ್ನು ರೆಮಿಟ್ ಮಾಡಲು ಕಾವೇರಿ ಗ್ರಾಮೀಣ ಬ್ಯಾಂಕ್, ತರೀಕೆರೆಗೆ ಆರೋಪಿಯಾದ ನೀವು ತೆಗೆದುಕೊಂಡು ಹೋದಿರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-22 ಃ ಪ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಡೆಬಿಟ್ ಚಲನ್ ಗೆ ಸಹಿ ಮಾಡಿ ರೆಮಿಟೆನ್ಸ್ ಪುಸ್ತಕದಲ್ಲಿ ನಗದು ಹಣವಾದ ರೂ.15,00,000/- ಗಳ ಮುಖಬೆಲೆಗಳನ್ನು ನಮೂದಿಸಿ ನಿಮ್ಮ ಸಹಿ ಹಾಗೂ ಸಮಯವನ್ನು ನಮೂದಿಸಿರುತ್ತಿರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-23 ಃ ಪ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಸಂಜೆ 04.00 ಗಂಟೆಯ ಸಮಯದಲ್ಲಿ ಪ್ರಾದೇಶಿಕ ಕಛೇರಿಯಿಂದ ದೂರವಾಣಿ ಕರೆ ಬಂದಿದ್ದು ತಾನು ಬ್ಯಾಂಕನ್ನು ಮುಚ್ಚದೆ ಹಿರಿಯ ಅಧಿಕಾರಿಗಳು ಬರುವವರೆಗೂ ಕಾಯುವಂತೆ ತಿಳಿಸಿದರು, ಸುಮಾರು 05.30 ಗಂಟೆಯ ಸಮಯಕ್ಕೆ ಚಾಸಾ-1 ಮತ್ತು 2 ರವರು ತಮ್ಮ ಬಾವಿಕೆರೆ ಶಾಖೆಗೆ ಬಂದು ಡೆಬಿಟ್ ಚಲನ್ ಹಾಗೂ ಕ್ಯಾಷ್ ರೆಮಿಟೆನ್ಸ್ ರಿಜಿಸ್ಟರ್ ನ್ನು ಪರಿಶೀಲಿಸಿ ಅವರ ವಶಕ್ಕೆ ಪಡೆದುಕೊಂಡರು, ಉಳಿದ

ನಗದು ಹಣದ ಮುಖಬೆಲೆಗಳನ್ನು ವೋಲ್ಟ್ (vault) ಪುಸ್ತಕದಲ್ಲಿ ನಮೂದಿಸಿ ತನ್ನ ಸಹಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-24 ಃ ಪ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ವೋಲ್ಟ್ ಪುಸ್ತಕದಲ್ಲಿ ತನ್ನ ಹಾಗೂ ವ್ಯವಸ್ಥಾಪಕರಾದ ಆರೋಪಿಯಾದ ನೀವು ಸಹಿ ಮಾಡಬೇಕಾಗಿದ್ದು, ಸದರಿ ದಿನದಂದು ಆರೋಪಿಯಾದ ನೀವು ಮರಳಿ ಬ್ಯಾಂಕ್ ಗೆ ಬರದ ಕಾರಣ ತಾನೊಬ್ಬನೆ ಸಹಿ ಮಾಡಿರುತ್ತೇನೆ, ನಂತರ ತಾನು ಬಾವಿಕೆರೆ ಶಾಖೆಯ ಬ್ಯಾಂಕ್ ನ್ನು ಮುಚ್ಚಿ ಮನೆಗೆ ಹಿಂದಿರುಗಿರುತ್ತೇನೆ, ತಾನು ಪೊಲೀಸರಿಗೆ ತನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-25 ಃ ಪ್ರಾಸಾ-4 ದೇವರಾಜ್, ವ್ಯವಸ್ಥಾಪಕರು ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 03.06.2013 ರಂದು ಹಿರಿಯ ವ್ಯವಸ್ಥಾಪಕರಾದ ಚಾಸಾ-2 ರವರು ತನಗೆ ಫೋನ್ ಮಾಡಿ ಬಾವಿಕೆರೆ ಶಾಖೆಯ ವ್ಯವಸ್ಥಾಪಕರಾದ ಆರೋಪಿಯಾದ ನೀವು ಬರುತ್ತೀರಿ, ದುಡ್ಡು ಕಳುವಾಗಿದೆ ಎಂದು, ತರೀಕೆರೆ ಪೊಲೀಸ್ ಠಾಣೆಗೆ ಆರೋಪಿಯಾದ ನಿಮ್ಮ ಜೊತೆ ಹೋಗುವಂತೆ ತಿಳಿಸಿದರು, ನಂತರ ಸಂಜೆ 05.00 ಗಂಟೆಗೆ ನಾವು ಬರುತ್ತೇವೆಂದು ತಿಳಿಸಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-26 ಃ ಪ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಸಂಜೆ 04.15 ಗಂಟೆ ಸುಮಾರಿಗೆ ಆರೋಪಿಯಾದ ನೀವು ತನ್ನ ಜೊತೆ ಬಂದಿರಿ, ತಾವು ತರೀಕೆರೆ ಪೊಲೀಸ್ ಠಾಣೆಗೆ ಹೋದೆವು, ನಂತರ ಚಾಸಾ-1 ಮತ್ತು 2 ರವರು ಬಾವಿಕೆರೆಯ ಶಾಖೆಗೆ ಭೇಟಿ ನೀಡಿ ಪೊಲೀಸ್ ಠಾಣೆಗೆ ಬಂದಿರುತ್ತಾರೆ, ಸುಮಾರು ಸಂಜೆ 06.45 ಗಂಟೆಯ ಸಮಯಕ್ಕೆ ಆರೋಪಿಯಾದ ನೀವು ಕುಸಿದು ಕೆಳಗೆ ಕುಳಿತರು, ನಂತರ ತಾವು ಆರೋಪಿಯಾದ ನಿಮ್ಮನ್ನು ಚಿಕಿತ್ಸೆಗಾಗಿ ತರೀಕೆರೆಯ ನರ್ಸಿಂಗ್ ಹೋಂಗೆ ಕರೆದುಕೊಂಡು ಹೋಗಿದ್ದು, ನಂತರ ಅಲ್ಲಿಂದ ಕಡೂರಿಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿ ದಾಖಲಿಸಿರುತ್ತಾರೆ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-27 ಃ ಪ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಮರುದಿನ ದಿಾಂಕ 04.06.2013 ರಂದು ಚಾಸಾ-1, 2 ಹಾಗೂ ಸತ್ಯನಾರಾಯಣರವರು ತರೀಕೆರೆ ಶಾಖೆಗೆ ಬಂದು ಆರೋಪಿಯಾದ ನೀವು ರೂ.15,00,000/- ಹಣವನ್ನು ತಮ್ಮ ತರೀಕೆರೆ ಶಾಖೆಯಲ್ಲಿ ಕಟ್ಟಿರುತ್ತಾರೋ ಎಂದು ವಿಚಾರಿಸಿದಾಗ ತಾನು ದಾಖಲೆ ಪರಿಶೀಲಿಸಿ ಹಣವನ್ನು ಕಟ್ಟಿಲ್ಲವೆಂದು ತಿಳಿಸಿದೆ, ನಂತರ ಚಾಸಾ-1 ರವರು ಬರವಣಿಗೆಯಲ್ಲಿ ಕೊಡುವಂತೆ ತಿಳಿಸಿದಾಗ ತಾನು ಬರೆದುಕೊಟ್ಟಿರುತ್ತೇನೆ, ತಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-28 ಃಪ್ರಾಸಾ-5 ಉಮೇಶ್.ಜಿ. ಸಂದೇಶವಾಹಕರು ರವರು ತಮ್ಮ ಸಾಕ್ಷ್ಯದಲ್ಲಿ, 2013 ನೇ ಸಾಲಿನಿಂದ ತಾನು ಬಾವಿಕೆರೆ ಶಾಖೆಯ ಕಾವೇರಿ ಗ್ರಾಮೀಣ ಬ್ಯಾಂಕ್ ನಲ್ಲಿ ಸಂದೇಶವಾಹಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ, 2013 ನೇ ಸಾಲಿನಲ್ಲಿ ಆರೋಪಿಯಾದ ನೀವು ಬಾವಿಕೆರೆ ಶಾಖೆಯ ವ್ಯವಸ್ಥಾಪಕರಾಗಿದ್ದಿರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-29 ಃಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 03.06.2013 ರಂದು ಆರೋಪಿಯಾದ ನೀವು ರೂ.15,00,000/- ಹಣವನ್ನು ರೆಮಿಟೆನ್ಸ್ ಮಾಡಲು ತರೀಕೆರೆ ಶಾಖೆಗೆ ತೆಗೆದುಕೊಂಡು ಹೋದಿರಿ, ಆ ದಿನ ಬೆಳಿಗ್ಗೆ 11.30 ಗಂಟೆಗೆ ಚೆಕ್ ಕ್ಲಿಯರೆನ್ಸ್ ಗಾಗಿ ತರೀಕೆರೆ ಶಾಖೆಗೆ ಕಳುಹಿಸಿದ್ದರು, ತಾನು ಮರಳಿ ಮಧ್ಯಾಹ್ನ 03.00 ಗಂಟೆಗೆ ಬಾವಿಕೆರೆ ಶಾಖೆಗೆ ಹೋದಾಗ ಆರೋಪಿಯಾದ ನೀವು ಇರಲಿಲ್ಲ, ಕ್ಯಾಷಿಯರ್ ಆದ ಸಚಿನ್ ರವರನ್ನು ವಿಚಾರಿಸಿದಾಗ ತರೀಕೆರೆ ಶಾಖೆಗೆ ರೂ.15,00,000/- ಹಣವನ್ನು ರೆಮಿಟೆನ್ಸ್ ಮಾಡಲು ತೆಗೆದುಕೊಂಡು ಹೋಗಿರುವುದಾಗಿ ತಿಳಿಸಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-30 ಃ ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಸಂಜೆ 05.30 ಗಂಟೆಯವರೆಗೆ ಕಾದರೂ ಆರೋಪಿಯಾದ ನೀವು ಮರಳಿ ಬರಲಿಲ್ಲ, ನಂತರ ತರೀಕೆರೆ ಶಾಖೆಗೆ ಫೋನ್ ಮಾಡಿ ವಿಚಾರಿಸಿದಾಗ ಆರೋಪಿಯಾದ ನೀವು ಹಣವನ್ನು ಕಟ್ಟಿಲ್ಲವೆಂದು ತಿಳಿಸಿದರು, ನಂತರ ತಮ್ಮ ಕ್ಯಾಷಿಯರ್ ಚಾಸಾ-1 ರವರಿಗೆ ಫೋನ್ ಮಾಡಿ ತಿಳಿಸಿದರು, ಆಮೇಲೆ ಚಾಸಾ-1 ರವರು ನಾವೇ ನಿಮ್ಮ ಬಾವಿಕೆರೆ ಶಾಖೆಗೆ ಬರುತ್ತೇವೆ ಕಾಯಿರಿ ಎಂದು ತಿಳಿಸಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-31 ಃ ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಚಾಸಾ-1 ರವರು ಅದೇ ದಿನ ಸಂಜೆ 06.00 ಗಂಟೆಗೆ ಬಂದು ವಿಚಾರಣೆ ಮಾಡಿಕೊಂಡು ಹೋಗಿರುತ್ತಾರೆ, ಚಾಸಾ-1 ರವರು ಅದೇ ದಿನ ತನ್ನ ಹೇಳಿಕೆಯನ್ನು ಬರವಣಿಗೆಯಲ್ಲಿ ಪಡೆದುಕೊಂಡಿರುತ್ತಾರೆ, ತಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-32 ಃ ಪ್ರಾಸಾ-6 ಗಾಯತ್ರಿ ವ್ಯವಸ್ಥಾಪಕರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 06.06.2013 ರಿಂದ 13.05.2016 ರವರೆಗೆ ತಾನು ಬಾವಿಕೆರೆ ಶಾಖೆಯ ಕಾವೇರಿ ಗ್ರಾಮೀಣ ಬ್ಯಾಂಕ್ ನಲ್ಲಿ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ, ತಾನು ಪೂರ್ವದಲ್ಲಿ ಅರಸೀಕೆರೆ ತಾಲ್ಲೂಕು ಬಾಗೇಶ್ವರದಲ್ಲಿ ಅಕೌಂಟ್ಸ್ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸುತ್ತಿದೆ, 2013 ನೇ ಸಾಲಿನ ಮೇ ತಿಂಗಳ 3 ನೇ ವಾರದಲ್ಲಿ

ಬಾವೀಕೆರೆಗೆ ಮ್ಯಾನೇಜರ್ ಆಗಿ ವರ್ಗಾವಣೆಯಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-33 ಃಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 05.06.2013 ರಂದು ಹಾಸನದ ಪ್ರಾದೇಶಿಕ ವ್ಯವಸ್ಥಾಪಕರಿಂದ ದೂರವಾಣಿ ಕರೆಯ ಮೂಲಕ ನೀವು ಇಂದೇ ನಿಮ್ಮ ಕರ್ತವ್ಯದಿಂದ ಬಿಡುಗಡೆ ಹೊಂದಿ ನಾಳೆಯೇ ಬಾವಿಕೆರೆ ಶಾಖೆಯಲ್ಲಿ ನಿಯೋಜನೆ ಹೊಂದುವಂತೆ ತಿಳಿಸಿದರು, ದಿನಾಂಕ 05.06.2023 ರಂದು ಸಂಜೆ ಚಾರ್ಜ್ ಕೊಟ್ಟು ಮರುದಿನ ಬಾವಿಕೆರೆಗೆ ಬಂದು ಚಾರ್ಜ್ ತೆಗೆದುಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-34 ಃಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 06.06.2013 ರಂದು ಬೆಳಿಗ್ಗೆ 10.00 ಗಂಟೆಗೆ ಬಾವಿಕೆರೆ ಶಾಖೆಗೆ ಹೋಗಿದ್ದು ಅರ್ಧ ಗಂಟೆಯ ಒಳಗೆ ನಮ್ಮ ಶಾಖೆಗೆ ಪೊಲೀಸರು ಬಂದರು ಹಾಗೂ ಗ್ರಾಮಸ್ಥರು ಸೇರಿದರು, ತಾನು ಕೇಂದ್ರ ವ್ಯವಸ್ಥಾಪಕರಿಗೆ ಪೋನ್ ಮೂಲಕ ತಿಳಿಸಿದಾಗ ಶಾಖೆಯ ಹಾಗೂ ಕ್ಯಾಷ್ ನ ಚಾರ್ಜ್ ತೆಗೆದುಕೊಂಡು ಏನು ಆಗುತ್ತಿದೆ ಎಂದು ವರದಿ ಮಾಡಿ ಎಂದು ತಿಳಿಸಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-35 ಃಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆಗ ತನಗೆ ದಿನಾಂಕ 03.06.2013 ರಂದು ಆರೋಪಿಯಾದ ನೀವು ರೂ.15,00,000/- ನಗದು ಹಣದ ರೆಮಿಟೆನ್ಸ್ ಗೆ ಅಂತ ತರೀಕೆರೆಗೆ ಹೋಗಿ ರೆಮಿಟೆನ್ಸ್ ಆಗದೇ ಹಣ ದುರುಪಯೋಗವಾಯಿತು ಎಂದು ತಿಳಿಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-36 ಃಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 06.06.2013 ರಂದು ಪೊಲೀಸರು 01.00 ರಿಂದ 02.50 ಗಂಟೆ ಸಮಯದಲ್ಲಿ ಪೊಲೀಸರು ಬಾವಿಕೆರೆ ಶಾಖೆಯ ಕಾವೇರಿ ಗ್ರಾಮೀಣ ಬ್ಯಾಂಕ್ ನಲ್ಲಿ ಸ್ಥಳ ಮಹಜರು ಜರುಗಿಸಿ ಛಾಯಚಿತ್ರವನ್ನು ತೆಗೆದು ತನ್ನ ಸಹಿಯನ್ನು ಪಡೆದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-37 ಃ ಪ್ರಾಸಾ-7 ಬಲರಾಮ್ ಎನ್, ಆಫೀಸ್ ಅಸಿಸ್ಟೆಂಟ್ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 05.01.2012 ರಿಂದ 3 ವರ್ಷಗಳ ಕಾಲ ತಾನು ಬಾವಿಕೆರೆಯ ಕಾವೇರಿ ಬ್ಯಾಂಕ್ ನ ಶಾಖೆಯಲ್ಲಿ ಆಫೀಸ್ ಅಸಿಸ್ಟೆಂಟ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-38 ಃ ಪ್ರಾಸಾ-7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ತನಗೆ ಗೊತ್ತು, ತಾನು ಬಾವಿಕೆರೆ ಶಾಖೆಯಲ್ಲಿ ಪ್ರಭಾರ ಕರ್ತವ್ಯ ನಿರ್ವಹಿಸುತ್ತಿದಾಗ ಆರೋಪಿಯಾದ ನೀವು ವ್ಯವಸ್ಥಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದಿರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-39 ಃ ಪ್ರಾಸಾ-7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 03.06.2013 ರಂದು ಮಧ್ಯಾಹ್ನ ಸುಮಾರು 02.10 ರ ಸಮಯದಲ್ಲಿ ಬಾವಿಕೆರೆ ಶಾಖೆಯಲ್ಲಿ ಕ್ಯಾಷ್ ಹಣ ಹೆಚ್ಚಾಗಿದೆ ಎಂದು ಹೇಳಿ ಸುಮಾರು ರೂ.15,00,000/- ಹಣವನ್ನು ರೆಮಿಟ್ ಮಾಡಲು ಕಾವೇರಿ ಗ್ರಾಮೀಣ ಬ್ಯಾಂಕ್, ತರೀಕೆರೆಗೆ ಆರೋಪಿಯಾದ ನೀವು ತೆಗೆದುಕೊಂಡು ಹೋದಿರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-40 ಃ ಪ್ರಾಸಾ-7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಡೆಬಿಟ್ ಚಲನ್ ಗೆ ಸಹಿ ಮಾಡಿ ರೆಮಿಟೆನ್ಸ್ ಪುಸ್ತಕದಲ್ಲಿ ನಗದು ಹಣವಾದ ರೂ.15,00,000/- ಗಳ ಮುಖಬೆಲೆಗಳನ್ನು ನಮೂದಿಸಿ ತರೀಕೆರೆ ಕಾವೇರಿ ಗ್ರಾಮೀಣ ಶಾಖೆಗೆ ರೆಮಿಟ್ ಮಾಡಲು ಹೋಗಿ ರೆಮಿಟ್ ಮಾಡದೇ ಬ್ಯಾಂಕಿನ ಹಣವನ್ನು ದುರುಪಯೋಗ ಮಾಡಿಕೊಂಡಿರುವ ಬಗ್ಗೆ ಚಾಸಾ-3 ರವರು ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-41 ಃ ಪ್ರಾಸಾ-7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತಾನು ದಿನಾಂಕ 27.05.2013 ರಿಂದ 04.06.2013 ರವರೆಗೆ ತನ್ನ ಸ್ವಂತ ಕೆಲಸದ ನಿಮಿತ್ತ ರಜೆಯನ್ನು ಪಡೆದು ಊರಿಗೆ ಹೋಗಿದ್ದು ಆ ಸಮಯದಲ್ಲಿ ಪ್ರಧಾನ ಕಛೇರಿಯಿಂದ ಚಾಸಾ-3 ರವರು ಪ್ರಭಾರದ ಮೇಲೆ ನೇಮಕಗೊಂಡಿದ್ದರು, ತಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ, ನಂತರ ಚಾಸಾ-1 ರವರು ಆರೋಪಿಯಾದ ನಿಮ್ಮ ವಿರುದ್ಧ ತರೀಕೆರೆ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುವ ಬಗ್ಗೆ ತಿಳಿಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-42 ಃ ಪ್ರಾಸಾ-8 ಗಣಪತಿ ಶಣೈ , ಮ್ಯಾನೇಜರ್ ಇವರು ತಮ್ಮ ಸಾಕ್ಷ್ಯದಲ್ಲಿ, ಮೇ 2013 ರಿಂದ ಮೇ 2014 ರವರೆಗೆ ತಾನು ಕಡೂರಿನ ಕಾವೇರಿ ಬ್ಯಾಂಕ್ ನ ಶಾಖೆಯಲ್ಲಿ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-43 ಃ ಪ್ರಾಸಾ-8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ತನಗೆ ಗೊತ್ತು, ದಿನಾಂಕ 06.06.2013 ರಂದು ರೂ.5,00,000/-ಹಣವನ್ನು

ಆರೋಪಿಯ ಮಗನಾದ ಸಾಯಿಕೃಷ್ಣ ಮಧ್ಯಾಹ್ನ 03.45 ಗಂಟೆಗೆ ತಮ್ಮ ಶಾಖೆಗೆ ಬಂದು ಕಟ್ಟಿರುತ್ತಾರೆ, ಬಾವಿಕೆರೆ ಶಾಖೆಯಲ್ಲಿ ಆರೋಪಿಯಾದ ನೀವು ಮಾಡಿದ ರೂ.15,00,000/- ಹಣದ ಅವ್ಯವಹಾರದ ಬಗ್ಗೆ ಬ್ಯಾಂಕಿಗೆ ಕಟ್ಟಬೇಕಾದ ಹಣವನ್ನು ತಮ್ಮ ಶಾಖೆಯ ಮೂಲಕ ಪ್ರಾದೇಶಿಕ ಕಛೇರಿಯ ಆದೇಶದ ಮೇರೆಗೆ ಕಟ್ಟಿರುತ್ತಾರೆ, ತಾನು ರೂ.15,00,000/- ಹಣವನ್ನು ಕಟ್ಟಿಸಿಕೊಂಡು ಪ್ರಾದೇಶಿಕ ಕಛೇರಿಗೆ ಈ ಬಗ್ಗೆ ಪತ್ರದ ಮುಖೇನ ತಿಳುವಳಿಕೆ ನೀಡಿರುತ್ತೇನೆ, ತಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-44 ಃಪ್ರಾಸಾ-9 ವೆಂಕಟೇಶರವರು ತಮ್ಮ ಸಾಕ್ಷ್ಯದಲ್ಲಿ, 2013 ನೇ ಸಾಲಿನಲ್ಲಿ ಬಾವಿಕೆರೆಯಲ್ಲಿರುವ ಗ್ರಾಮೀಣ ಬ್ಯಾಂಕ್ ನಲ್ಲಿ ಮ್ಯಾನೇಜರ್ ಅವ್ಯವಹಾರ ಮಾಡಿರುವ ಕುರಿತು ಪೊಲೀಸರು ಸ್ಥಳದಲ್ಲಿ ಮಧ್ಯಾಹ್ನದ ಸಮಯದಲ್ಲಿ ಮಹಜರು ಮಾಡಿ ಛಾಯಚಿತ್ರ ತೆಗೆದು ಸದರಿ ಮಹಜರಿಗೆ ತನ್ನ ಸಹಿ ಪಡೆದುಕೊಂಡಿರುತ್ತಾರೆ, ಮಹಜರು ಕಾಲದಲ್ಲಿ ಚಾಸಾ-10 ರವರೂ ಸಹ ಹಾಜರಿದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-45 ಃಪ್ರಾಸಾ-10 ಶ್ರೀಧರ್ ಗೌಡರವರು ತಮ್ಮ ಸಾಕ್ಷ್ಯದಲ್ಲಿ, 2013 ನೇ ಸಾಲಿನಲ್ಲಿ ಬಾವಿಕೆರೆಯಲ್ಲಿರುವ ಬ್ಯಾಂಕ್ ನಲ್ಲಿ ಮ್ಯಾನೇಜರ್ ಅವ್ಯವಹಾರ ಮಾಡಿರುವ ಕುರಿತು ಪೊಲೀಸರು ಸ್ಥಳದಲ್ಲಿ ಮಹಜರು ಮಾಡಿ ಛಾಯಚಿತ್ರ ತೆಗೆದು ಸದರಿ ಮಹಜರಿಗೆ ತನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-46 ಃಪ್ರಾಸಾ-11 ಗಿರೀಶ.ವೈ, ಮುಖ್ಯಪೇದೆ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 06.06.2013 ರಂದು ತನಗೆ ಮತ್ತು ಪಿಸಿ-15 ರಾಜಕುಮಾರವರನ್ನು ಆರೋಪಿ ಪತ್ತೆ ಕಾರ್ಯಕ್ಕಾಗಿ ನೇಮಿಸಿದ್ದು, ಸದರಿ ದಿನ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಪಿ.ಐ. ರವರಿಗೆ ಈ ಪ್ರಕರಣದಲ್ಲಿ ಖಚಿತ ವರ್ತಮಾನ ಮಾಹಿತಿ ಬಂದ ಮೇರೆಗೆ ತನಗೆ ಹಾಗೂ ಪಿಸಿ-15 ರವರನ್ನು ಇಲಾಖಾ ಜೀಪಿನಲ್ಲಿ ಬೆಳಿಗ್ಗೆ 09.30 ಗಂಟೆಗೆ ಕರೆದುಕೊಂಡು ಕಡೂರು ರೈಲ್ವೇ ನಿಲ್ದಾಣಕ್ಕೆ ಹೋಗಿ ಪೊಲೀಸ್ ಬಾತ್ಮೀದಾರರಿಂದ ಮಾಹಿತ ಬಂದ ಮೇರೆಗೆ ಆರೋಪಿಯಾದ ನಿಮ್ಮನ್ನು ತಾವುಗಳು ಸುತ್ತುವರೆದು ಹಿಡಿದುಕೊಂಡೆವು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-47 ಃಪ್ರಾಸಾ-11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಪಿ.ಐ. ರವರಾದ ಚಾಸಾ-14 ರವರು ಆರೋಪಿಯಾದ ನಿಮ್ಮ ಹೆಸರು ವಿಳಾಸ ಕೇಳಲಾಗಿ ರವಿನಾರಾಯಣ ಬಿನ್ ಅಶ್ವತ್ ನಾರಾಯಣ, ವ್ಯವಸ್ಥಾಪಕರು, ಕಾವೇರಿ ಗ್ರಾಮೀಣ

ಬ್ಯಾಂಕ್, ಬಾವಿಕೆರೆ ಶಾಖೆ, ಹಾಲಿ ವಾಸ ವೆಂಕಟೇಶ ನಗರ, ಕಡೂರು ಎಂದು ತಿಳಿಸಿದ ಮೇರೆಗೆ, ಆರೋಪಿಯಾದ ನೀವು ಈ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಯಾಗಿದ್ದರಿಂದ ಬೆಳಿಗ್ಗೆ 10.30 ಗಂಟೆಗೆ ವಶಕ್ಕೆ ತೆಗೆದುಕೊಂಡು ಇಲಾಖಾ ಜೀಪಿನಲ್ಲಿ ಬೆಳಿಗ್ಗೆ 11.30 ಕ್ಕೆ ಠಾಣೆಗೆ ಕರೆದುಕೊಂಡು ಚಾಸಾ-14 ರವರು ದಸ್ತಗಿರಿ ಕ್ರಮ ಅನುಸರಿಸಿರುತ್ತಾರೆ, ಆ ಸಮಯದಲ್ಲಿ ತಾನು ಚಾಸಾ-14 ರವರಿಗೆ ಸಹಕರಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-48 ಃ ಪ್ರಾಸಾ-12 ಸಿ.ಡಿ.ಈಶ್ವರಪ್ಪ, ನಿವೃತ್ತ ಎ.ಎಸ್.ಐ. ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 15.05.2013 ರಂದು ತಾನು ಠಾಣಾ ಪ್ರಭಾರದಲ್ಲಿದ್ದಾಗ ಮಧ್ಯಾಹ್ನ 12.30 ಗಂಟೆಯ ಸಮಯದಲ್ಲಿ ತರೀಕೆರೆಯ ಪಿಸಿ-617 ವೈ.ಗಿರೀಶ್ ರವರು ಲಕ್ಕವಳ್ಳಿ, ಪೊಲೀಸ್ ಠಾಣೆಗೆ ಬಂದು ತರೀಕೆರೆ ಪೊಲೀಸ್ ಠಾಣಾ ಮೊಕದ್ದಮೆ ನಂ.130/2013 ಕಲಂ 409 ಮತ್ತು 420 ರಡಿಯಲ್ಲಿ ದಾಖಲಾಗಿರುವ ಕೇಸಿನ ಕಡತವನ್ನು ಲಕ್ಕವಳ್ಳಿ ಪೊಲೀಸ್ ಠಾಣಾ ಸರಹದ್ದಿನ ಆಧಾರದ ಮೇಲೆ ತಮಗೆ ಹಸ್ತಾಂತರಿಸಿದ್ದು, ಅದನ್ನು ತಾನು ಸ್ವೀಕರಿಸಿ ತಮ್ಮ ಠಾಣಾ ಮೊಕದ್ದಮೆ ಕಲಂ 409 ಮತ್ತು 420 ರಡಿಯಲ್ಲಿ ದಾಖಲಿಸಿಕೊಂಡು ಅದೇ ದಿನ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-49 ಃಪ್ರಾಸಾ-12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 19.06.2013 ರಂದು ಆರೋಪಿಯಾದ ನಿಮ್ಮ ನ್ಯಾಯಾಂಗ ಬಂಧನವನ್ನು ಮುಂದುವರೆಸುವಂತೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತೇನೆ, ಈ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಪಿ.ಎಸ್.ಐ. ಸಚಿನ್ ರವರಿಗೆ ದಿನಾಂಕ 01.07.2013 ರಂದು ಹಸ್ತಾಂತರಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-50 ಃ ಪ್ರಾಸಾ-13 ರಾಜ್ ಕುಮಾರ್.ಎಂ.ಆರ್. ಪಿಸಿ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 06.06.2013 ರಂದು ತಾನು ಮತ್ತು ಚಾಸಾ-12 ರವರು ಅಪರಾಧ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಠಾಣಾ ಕರ್ತವ್ಯದಲ್ಲಿದ್ದಾಗ ಪೊಲೀಸ್ ನಿರೀಕ್ಷಕರಾದ ಚಾಸಾ-14 ರವರು ತಮ್ಮನ್ನು ಕರೆದು ಈ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಯಾದ ನೀವು ಕಡೂರಿನಲ್ಲಿ ಇರುವುದಾಗಿ ಮಾಹಿತಿ ಬಂದಿದೆ ಹೋಗೋಣ ಎಂದು ಇಲಾಖಾ ಜೀಪ್ ನಲ್ಲಿ ತಮ್ಮನ್ನು ಕರೆದುಕೊಂಡು ಬೆಳಿಗ್ಗೆ 09.30 ಗಂಟೆಗೆ ಹೊರಟರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-51 ಃ ಪ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನಿಮ್ಮನ್ನು ಕಡೂರು ರೈಲ್ವೇ ನಿಲ್ದಾಣದಲ್ಲಿ ಬಾತ್ಮಿದಾರರ ಮೂಲಕ ಪತ್ತೆ ಮಾಡಿ

ಆರೋಪಿಯಾದ ನಿಮ್ಮನ್ನು ವಶಕ್ಕೆ ಪಡೆದುಕೊಂಡು ಆರೋಪಿಯಾದ ನಿಮ್ಮನ್ನು ಕರೆದುಕೊಂಡು ಮರಳಿ ಪೊಲೀಸ್ ಠಾಣೆಗೆ ಬಂದಿರುತ್ತೇವೆ, ಪೊಲೀಸ್ ನಿರೀಕ್ಷಕರು ಮುಂದಿನ ಕ್ರಮವನ್ನು ಜರುಗಿಸಿರುತ್ತಾರೆ, ತಾನು ತನಿಖಾಧಿಕಾರಿಗಳಿಗೆ ಈ ಕುರಿತು ತನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-52 ಃಪ್ರಾಸಾ-14 ಬಿ.ಹೆಚ್.ಚಂದ್ರಶೇಖರ್ ನಿವೃತ್ತ ಎ.ಎಸ್.ಐ. ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 31.08.2013 ರಂದು ತಮ್ಮ ಠಾಣಾ ಪಿ.ಎಸ್.ಐ. ಆದ ಚಾಸಾ-16 ರವರಿಗೆ ವರ್ಗಾವಣೆ ಆಗಿದ್ದು ದಿನಾಂಕ 03.09.2013 ರಂದು ಸದರಿ ಪಿ.ಎಸ್.ಐ. ರವರು ತನಗೆ ಠಾಣಾ ಪ್ರಭಾರದ ಜೊತೆಗೆ ಈ ಪ್ರಕರಣದ ತನಿಖೆಯನ್ನು ವಹಿಸಿದ್ದು ತಾನು ತನಿಖೆಯನ್ನು ಮುಂದುವರೆಸಿ ಅದೇ ದಿನ ಪಿರ್ಯಾದುದಾರಿಗೆ ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸುವಂತೆ ದೂರವಾಣಿ ಮೂಲಕ ತಿಳಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-53 ಃಪ್ರಾಸಾ-14 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 06.09.2013 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 9 ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ, ತಾನು ಸದರಿ ದಾಖಲಾತಿಗಳನ್ನು ಸ್ವೀಕರಿಸಿಕೊಂಡಿರುತ್ತೇನೆ, ಅದೇ ದಿನ, ಸಾಕ್ಷಿದಾರರಾದ ಚಾಸಾ-2 ರಿಂದ ಚಾಸಾ-4 ಮತ್ತು ಚಾಸಾ-7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ, ನಂತರ, ದಿನಾಂಕ 07.09.2013 ರಂದು ಆರೋಪಿಯಾದ ನಿಮ್ಮ ವಿರುದ್ಧ ತನಿಖೆ ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-54 ಃಪ್ರಾಸಾ-14 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಕಾವೇರಿ ಗ್ರಾಮೀಣ ಬ್ಯಾಂಕ್, ಬಾವಿಕೆರೆ ಶಾಖೆಯಲ್ಲಿ ದಿನಾಂಕ 04.06.2013 ರಂದು ಸಚಿನ್‌ಕುಮಾರ್, ಕಛೇರಿ ಸಹಾಯಕ, ಕಾವೇರಿ ಗ್ರಾಮೀಣ ಬ್ಯಾಂಕ್, ಬಾವಿಕೆರೆ ಶಾಖೆ ರವರು ಕೇಂದ್ರ ವ್ಯವಸ್ಥಾಪಕರು, ಕಾವೇರಿ ಗ್ರಾಮೀಣ ಬ್ಯಾಂಕ್, ಚಿಕ್ಕಮಗಳೂರು ದಿನಾಂಕ 03.06.2013 ರಂದು ಕಾವೇರಿ ಗ್ರಾಮೀಣ ಬ್ಯಾಂಕ್, ಬಾವಿಕೆರೆ ಶಾಖೆಯಲ್ಲಿ ರೂ.16,00,000/- ಬಾಕಿ ಇದ್ದು, ಸದರಿ ರೂ.16,00,000/- ಹಣದಲ್ಲಿ ಆರೋಪಿಯಾದ ನೀವು ತನಗೆ ರೂ.15,00,000/- ಹಣವನ್ನು ಕಾವೇರಿ ಗ್ರಾಮೀಣ ಬ್ಯಾಂಕ್, ತರೀಕೆರೆ ಶಾಖೆಗೆ ರೆಮಿಟ್ ಮಾಡಲು ರೆಡಿ ಮಾಡುವಂತೆ ತಿಳಿಸಿದ್ದು, ಆರೋಪಿಯಾದ ನಿಮ್ಮ ನಿರ್ದೇಶನದ ಮೇರೆಗೆ ರೂ.15,00,000/- ಹಣವನ್ನು ಮಧ್ಯಾಹ್ನ 01.30 ಗಂಟೆಗೆ ತಾನು ರೆಡಿ ಮಾಡಿರುತ್ತೇನೆ, ಆರೋಪಿಯಾದ ನೀವು ರೂ.15,00,000/- ಹಣಕ್ಕೆ ಡೆಬಿಟ್ ಚಲನ್ ನೀಡಿ ಮಧ್ಯಾಹ್ನ 02.10 ಗಂಟೆಯ

ಸಮಯದಲ್ಲಿ ಹಣವನ್ನು ಪಡೆದ ಬಗ್ಗೆ ಸ್ವೀಕೃತಿಯನ್ನು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-55 ಃ ಪ್ರಾಸಾ-15 ಹೆಚ್.ಎಸ್.ಸುರೇಶ್, ಸಿ.ಪಿ.ಐ. ರವರು ತಮ್ಮ ಸಾಕ್ಷ್ಯದಲ್ಲಿ, ತಾನು ದಿನಾಂಕ 27.06.2011 ರಿಂದ 28.06.2014 ರವರೆಗೆ ತರೀಕೆರೆಯ ನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-56 ಃಪ್ರಾಸಾ-15 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 04.06.2013 ರಂದು ಜಾಸಾ-1 ರವರು ಸಂಜೆ 07.00 ಗಂಟೆ ಸಮಯದಲ್ಲಿ ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ತರೀಕೆರೆ ಠಾಣಾ ಗುನ್ನಾ ಸಂಖ್ಯೆ 130/2013 ರಲ್ಲಿ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ, ಪ್ರಥಮ ವರ್ತಮಾನ ವರದಿಯೊಂದಿಗೆ 1 ರಿಂದ 8 ಅಡಕಗಳನ್ನು ಲಗತ್ತಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-57 ಃಪ್ರಾಸಾ-15 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 06.06.2013 ರಂದು ಕೃತ್ಯ ಸ್ಥಳಕ್ಕೆ ಭೇಟಿ ನೀಡಿದಾಗ ಜಾಸಾ-9 ಮತ್ತು 10 ಹಾಗೂ ಪ್ರಭಾರ ವ್ಯವಸ್ಥಾಪಕರಾದ ಜಾಸಾ-8 ರವರು ಹಾಜರಿದ್ದು ಕೃತ್ಯ ಸ್ಥಳದ ಮಹಜರು ಕ್ರಮವನ್ನು ಮಧ್ಯಾಹ್ನ 01.10 ರಿಂದ 02.50 ರವರೆಗೆ ಜರುಗಿಸಿರುತ್ತೇವೆ, ಸ್ಥಳದಲ್ಲಿ ಛಾಯಾಚಿತ್ರ ತೆಗೆದು, ನಕಾಶೆ ತಯಾರಿಸಿರುತ್ತೇನೆ, ಅದೇ ದಿನ ಸಾಕ್ಷಿದಾರರಾದ ಗಾಯತ್ರಿ ಕೋಂ ಲೋಕೇಶ್, ನಿತ್ಯಾನಂದ ಬಿನ್ ಶೇಷಣ್ಣಗೌಡ, ಎಸ್.ಆರ್.ರವಿ ಬಿನ್ ರಾಜಪ್ಪ, ಸುಜಾತ ಕೋಂ ಲೇಟ್ ನರಸಿಂಹಸ್ವಾಮಿ, ವಿಶ್ವನಾಥ ಬಿನ್ ಲೇಟ್ ವೇಲುಸ್ವಾಮಿ, ನಾರಾಯಗೌಡ ಲೇಟ್ ಪುಟ್ಟೇಗೌಡರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-58 ಃಪ್ರಾಸಾ-15 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಆರೋಪಿಯಾದ ನಿಮ್ಮ ಪತ್ತೆಗೆ ನೇಮಕವಾದ ಸಿಬ್ಬಂದಿಗಳಾದ ಸಿ.ಪಿ.ಸಿ.615 ಗಿರೀಶ್ ಮತ್ತು ಸಿ.ಪಿ.ಸಿ.15 ರಾಜಕುಮಾರ್ ರವರು ಆರೋಪಿಯಾದ ನಿಮ್ಮನ್ನು ಕಡೂರು ರೈಲ್ವೆ ನಿಲ್ದಾಣದಲ್ಲಿ ವಶಕ್ಕೆ ಪಡೆದು ಬೆಳಗ್ಗೆ 11.30 ಗಂಟೆಗೆ ತನ್ನ ಮುಂದೆ ಹಾಜರುಪಡಿಸಿರುತ್ತಾರೆ, ಆರೋಪಿಯಾದ ನಿಮ್ಮನ್ನು ದಸ್ತಗಿರಿ ಮಾಡಿ ದಸ್ತಗಿರಿ ಕ್ರಮ ಅನುಸರಿಸಿ ಆರೋಪಿಯಾದ ನಿಮ್ಮ ಸ್ವಇಚ್ಛಾ ಹೇಳಿಕೆಯನ್ನು ದಾಖಲು ಮಾಡಿಕೊಂಡು ನಂತರ ಆರೋಪಿಯಾದ ನಿಮ್ಮನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-59 ಃಪ್ರಾಸಾ-15 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 07.06.2013 ರಂದು ಸದರಿ ಪ್ರಕರಣದ ಕೃತ್ಯ ಸ್ಥಳವು ತರೀಕೆರೆ ಗ್ರಾಮಾಂತರ ವೃತ್ತ ಲಕ್ಕವಳ್ಳಿ ಪೊಲೀಸ್ ಸರಹದ್ದಿಗೆ ಸೇರಿರುವುದರಿಂದ ಕೃತ್ಯ ಸ್ಥಳದ ಆಧಾರದ ಮೇರೆಗೆ ಸದರಿ ಪ್ರಕರಣದ ಸಂಪೂರ್ಣ ಕಡತವನ್ನು ಲಕ್ಕವಳ್ಳಿ ಪೊಲೀಸ್ ಠಾಣೆಗೆ ವರ್ಗಾವಣೆ ನೀಡಿ ಎಂದು ಮಾನ್ಯ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತೇನೆ, ದಿನಾಂಕ 10.06.2013 ರಂದು ಸಿ.ಜೆ. ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ತರೀಕೆರೆರವರು ಸದರಿ ಪ್ರಕರಣವನ್ನು ಲಕ್ಕವಳ್ಳಿ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಲು ಅನುಮತಿ ನೀಡಿರುತ್ತಾರೆ, ಸದರಿ ಆದೇಶದ ಪ್ರಕಾರ ತಾನು ದಿನಾಂಕ 13.06.2013 ರಂದು ಠಾಣಾ ಪಿ.ಸಿ.617 ಗಿರೀಶ್ ರವರ ಮೂಲಕ ಸಂಪೂರ್ಣ ಕಡತವನ್ನು ಲಕ್ಕವಳ್ಳಿ ಪೊಲೀಸ್ ಠಾಣೆಗೆ ವರ್ಗಾಯಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-60 ಃಪ್ರಾಸಾ-15 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 07.06.2013 ರಂದು ಚಿಕ್ಕಮಗಳೂರಿನ ಕಾವೇರಿ ಗ್ರಾಮೀಣ ಬ್ಯಾಂಕಿನ ಕೇಂದ್ರ ವ್ಯವಸ್ಥಾಪಕರವರಿಂದ ಒಂದು ಪತ್ರವನ್ನು ಸ್ವೀಕರಿಸಿರುತ್ತೇನೆ, ಸದರಿ ಪತ್ರದಲ್ಲಿ ಆರೋಪಿ ರವಿನಾರಾಯಣ್ ರವರ ಮಗ ಸಾಯಿಕೃಷ್ಣರವರು ಕಾವೇರಿ ಗ್ರಾಮೀಣ ಬ್ಯಾಂಕ್, ಕಡೂರು ಶಾಖೆಗೆ ರೂ.5 ಲಕ್ಷ ಹಣವನ್ನು ಅವರು ಕೊಡಬೇಕಾದ ರೂ.15 ಲಕ್ಷ ಹಣದ ಪೈಕಿ ಸಂದಾಯ ಆಗಿರುತ್ತದೆ ಎಂದು ತಿಳಿಸಿರುತ್ತಾರೆ. ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-61 ಃಪ್ರಾಸಾ-16 ಎಸ್.ಬಿ.ಸಿದ್ದನಾಯಕ, ಮುಖ್ಯಪೇದೆ ರವರು ತಮ್ಮ ಸಾಕ್ಷ್ಯದಲ್ಲಿ, ತಾನು 2012 ರಿಂದ 2015 ರವರೆಗೂ ತರೀಕೆರೆ ಪೊಲೀಸ್ ಠಾಣೆಯಲ್ಲಿ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ತಾನು ಈ ಪ್ರಕರಣದಲ್ಲಿ ತನಿಖಾಧಿಕಾರಿಗಳಾದ ಚಾಸಾ-14 ರವರು ನಿರ್ದೇಶಿಸಿದ ಮೇರೆಗೆ ದಿನಾಂಕ 06.06.2013 ರಂದು ತರೀಕೆರೆ ತಾಲ್ಲೂಕಿನ ಬಾವಿಕೆರೆ ಗ್ರಾಮದ ಕಾವೇರಿ ಗ್ರಾಮೀಣ ಬ್ಯಾಂಕ್ ನಡೆಸಲು ಬಾಡಿಗೆ ನೀಡಿರುವ ಸುರೇಶ್ ರವರ ಬ್ಯಾಂಕ್ ಕಟ್ಟಡದ ಒಳಭಾಗದಲ್ಲಿ ಪಂಚರಾದ ಶ್ರೀಧರಗೌಡ ಹಾಗೂ ವೆಂಕಟೇಶ್ ರವರ ಸಮಕ್ಷಮ ಮಧ್ಯಾಹ್ನ 01.10 ರಿಂದ 02.50 ರ ಸಮಯದವರೆಗೂ ಚಾಸಾ-14 ರವರು ಮಹಜರು ಕ್ರಮ ಜರುಗಿಸಿದ್ದು ತಾನು ಮಹಜರಿನ ವಕ್ಕಣಿಯನ್ನು ತನ್ನ ಕೈ ಬರಹದಲ್ಲಿ ಬರೆದಿರುತ್ತೇನೆ, ಸದರಿ ಸಮಯದಲ್ಲಿ ತಾನು ನಿಪಿ-19 ರಂತೆ ಛಾಯಾಚಿತ್ರವನ್ನು ತೆಗೆದಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-62 ಃಪ್ರಾಸಾ-16 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 03.06.2013 ರಂದು ಕಾವೇರಿ ಗ್ರಾಮೀಣ ಬ್ಯಾಂಕಿನಲ್ಲಿ ಕ್ಯಾಶಿಯರ್ ಆಗಿದ್ದ ಸಚಿನ್ ಕುಮಾರ್ ರವರು ಗ್ರಾಹಕರು ಬ್ಯಾಂಕಿಗೆ ಕಟ್ಟಿದ ರೂ.15 ಲಕ್ಷ ಹಣವನ್ನು ಬಂಡಲ್ ಮಾಡಿ ವೋಚರ್ ಬರೆದು, ತರೀಕೆರೆ ಶಾಖೆಯ ಕಾವೇರಿ ಗ್ರಾಮೀಣ ಬ್ಯಾಂಕಿನ ಮುಖ್ಯ ಕಛೇರಿಗೆ ಸಂದಾಯ ಮಾಡಲು ಅಂದಿನ ಬ್ಯಾಂಕ್ ಮ್ಯಾನೇಜರ್ ಆಗಿದ್ದ ಆರೋಪಿಯಾದ ನಿಮಗೆ ನೀಡಿದ್ದು ಸದರಿ ಆರೋಪಿಯಾದ ನೀವು ಹಣವನ್ನು ಬ್ಯಾಂಕಿಗೆ ಜಮಾ ಮಾಡದೇ ಬ್ಯಾಂಕಿಗೆ ಹಾಗೂ ಗ್ರಾಹಕರಿಗೆ ವಂಚನೆ ಮಾಡಿದ ಕುರಿತು ತಮಗೆ ದೂರು ಬಂದ ಮೇರೆಗೆ ತನಿಖಾಧಿಕಾರಿಗಳು ಮಹಜರು ಜರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-63 ಃಪ್ರಾಸಾ-17 ಸಚಿನ್ ಕುಮಾರ್, ಪೊಲೀಸ್ ನಿರೀಕ್ಷಕರು, ಲೋಕಾಯುಕ್ತ ರವರು ತಮ್ಮ ಸಾಕ್ಷ್ಯದಲ್ಲಿ, ತಾನು ದಿನಾಂಕ 01.03.2012 ರಿಂದ 02.09.2013 ರವರೆಗೆ ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ, ದಿನಾಂಕ 01.07.2013 ರಂದು ಈ ಪ್ರಕರಣದ ತನಿಖೆಯನ್ನು ಚಾಸಾ-15 ರವರಿಂದ ಸ್ವೀಕರಿಸಿ ದಿನಾಂಕ 20.08.2013 ರಂದು ಕಾವೇರಿ ಗ್ರಾಮೀಣ, ಬಾವಿಕೆರೆಯ ಬ್ಯಾಂಕಿಗೆ ಭೇಟಿ ನೀಡಿ ಸಾಕ್ಷಿದಾರರಾದ 5, 6 ಮತ್ತು 8 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-64 ಃಪ್ರಾಸಾ-17 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 02.09.2013 ರಂದು ತನಗೆ ಬೀರೂರು ಠಾಣೆಗೆ ವರ್ಗಾವಣೆ ಆಗಿದ್ದರಿಂದ ಮುಂದಿನ ತನಿಖೆಯನ್ನು ಚಾಸಾ-17 ರವರಿಗೆ ವಹಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-65 ಃ ಈ ಕೇಸಿನ ಬಗ್ಗೆ ನೀವು ಏನಾದರೂ ಹೇಳುವುದಿದೆಯಾ?

ಉತ್ತರ ಃ ಇಲ್ಲ

ಪ್ರಶ್ನೆ-66 ಃ ನಿಮ್ಮ ಪರವಾಗಿ ಯಾರಾದರೂ ಸಾಕ್ಷಿಗಳಿದ್ದಾರಾ ಮತ್ತು ಯಾವುದಾದರೂ ದಾಖಲೆಗಳಿವೆಯಾ?

ಉತ್ತರ ಃ ಇಲ್ಲ

(ಈ ಹೇಳಿಕೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಕೇಳಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ನಾನೇ ಯಥಾವತ್ತಾಗಿ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆಯೆಂದು ದೃಢೀಕರಿಸುತ್ತೇನೆ.)

ದಿನಾಂಕ ಃ 02.06.2025

ಸಹಿ
**(ಊರ್ಮಿಳ.ವಿ)**
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ತರೀಕೆರೆ.